ಈ ದಿನ ದಿನಾಂಕಃ 20-03-2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀಸವಾಲು **2,4,** ಮತ್ತು **8** ನೇ ಪ್ರತಿವಾದಿಗಳ ಪರ ಶ್ರೀ ಕೆ ಜಿ ಎಸ್ ವಕೀಲರಿಂದಃ

2. ಕಾಶಿ ನನ್ನ ತಂದೆ. ದಿಃ 27.08.2021 ರಂದು ನನ್ನ ತಂದೆ ಹಾಗುಾ ಆತನ ಸಹೋದರರು ಹಾಗೂ ಸಹೋದರಿಯರು ಸೇರಿ ವಿಬಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ 27.08.2021 ರ ಮೂಲ ವಿಬಾಗ ಪತ್ರವನ್ನು ತೋರಿಸಿ ಕೇಳಲಾಗಿ ಅದು ಮೋಸ ಮಾಡಲು ಮಾಡಿಕೊಂಡ ದಾಖಲೆಯಾಗಿದ್ದು ಮತ್ತು ಅಂತಿಮ ಡಿಕ್ರಿಯಾದ ಮೇಲೆ ಮಾಡಿಕೊಂಡ ದಾಖಲೆಯಾಗಿದೆ ಎಂದು ನುಡಿಯುತ್ತಾರೆ. ಸಾಕ್ಷಿ ಸದರಿ ದಾಖಲೆಯನ್ನು ನೋಡಲು ನಿರಾಕರಿಸಿ ಅದನ್ನು ಒಪ್ಪಲು ನಿರಾಕರಿಸಿರುತ್ತಾರೆ.

3. ದಾವಾ ಸ್ವತ್ತು ಮಂಜೂರಾದ ಜಮೀನಾಗಿದೆ. ನಂತರ ಪೋಡಾಗಿರಬಹುದು ಗೊತ್ತಿಲ್ಲ. ಸದರಿ ಜಮೀನು ನನ್ನ ಅಜ್ಜ ಮಾಣಿಕ್ಯಂರವರಿಗೆ ಮಂಜೂರಾಗಿತ್ತು. ಆ ಜಮೀನಿನ ಪೋಡಿ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಸಾಕ್ಷಿ ಒಂದು ಪೋಡಿ ದಾಖಲೆಯನ್ನು ತೋರಿಸಲಾಗಿ ಅದನ್ನು ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಗುರುತು ಹಾಗೂ ಚೆಕ್ಕು ಬಂದಿಯ ಕುರಿತು ಸರ್ವೆ ದಾಖಲೆಗಳನ್ನು ನಾನು ನೋಡಿಲ್ಲ ಮತ್ತು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸರ್ವೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇದೆ. ಆ ರೀತಿ ತೊಂದರೆ ಎಂದರೆ ಆ ದಾಖಲೆಗಳು ನಮ್ಮ ಸ್ವಾದೀನದ ಅನುಸಾರವಾಗಿ ಇರುವುದಿಲ್ಲ.

4. ಸರ್ವೆ ದಾಖಲೆಗಳನ್ನು ನಮ್ಮ ಸ್ವಾದೀನದಂತೆ ಅರ್ಜಿಯನ್ನು ಸಲ್ಲಿಸಿಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿ 3 ನೇ ಪೋಡಿಗೆ ಸೇರಿದ್ದಾಗಿದೆ ಎಂದರೆ ಸರಿ. 3 ನೇ ಪೋಡು ಬೋಜರಾಜರವರ ಹೆಸರಿನಲ್ಲಿದೆ. ಸರ್ವೆ ದಾಖಲೆಗೂ, ಡಿಕ್ರಿಗೂ, ಆಸ್ತಿಯ ವಿವರಣೆಗೂ ಅಳತೆಗೂ ವ್ಯತ್ಯಾಸ ಇದ್ದ ಕಾರಣ ಡಿಕ್ರಿ ಆದಾರದಲ್ಲಿ ನಮ್ಮ ಹೆಸರಿಗೆ ಹಕ್ಕು ಬದಲಾವಣೆ ವಹಿಗಳಾಗಿಲ್ಲ ಎಂದರೆ ಸಾಕ್ಷಿ ನಾವು ಇನ್ನೂ ಅರ್ಜಿ

ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಹಕ್ಕು ಬದಲಾವಣೆಯನ್ನು ಡಿಕ್ರಿ ಆದಾರದಲ್ಲಿ ಮಾಡದ ಕಾರಣಕ್ಕಾಗಿ ನೊಂದಾಯಿತ ಪಾಲು ವಿಬಾಗ ಪತ್ರವನ್ನು ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ.

5. ನಿಪಿ 2 ರಲ್ಲಿ ನನ್ನ ತಂದೆಯ ಪಾಲಿಗೆ 1 ಎಕರೆ 27 ಗುಂಟೆ ಬಂದಿರಬಹುದು ನನಗೆ ಗೊತ್ತಿಲ್ಲ. ಡಿಕ್ರಿಯಲ್ಲಿ ಹಾಗೂ ಪಾಲು ವಿಬಾಗ ಪತ್ರದಲ್ಲಿರುವ ಚೆಕ್ಕುಬಂದಿಗಳು ತಾಳೆಯಿಲ್ಲ ಎಂದರೆ ಸರಿಯಲ್ಲ.

ಪ್ರಶ್ನೆಃ ದಾವಾ ಸ್ವತ್ತಿನ ಚೆಕ್ಕುಬಂದಿ ಬೇರೆಯವರ ಆಸ್ತಿಯೇ ?

ಉತ್ತರಃ 2 ನೇ ಪೋಡಿನವರಿಗೆ 3 ನೇ ಪೋಡಿನ ಆಸ್ತಿ ಹೋಗಿದ್ದು, 3 ನೇ ಪೋಡಿನವರಿಗೆ 2 ನೇ ಪೋಡಿನ ಆಸ್ತಿ ಬಂದಿರುತ್ತದೆ.

6. ನಿಪಿ 2 ರಲ್ಲಿ ಎಲ್ಲ ಹೆಣ್ಣುಮಕ್ಕಳನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. ಸದರಿ ವಿಬಾಗ ಪತ್ರಕ್ಕೆ 8 ನೇ ಪ್ರತಿವಾದಿಯ ಮಗಳು ಪಕ್ಷಗಾರಳಲ್ಲ ಎಂದರೆ ಸರಿ. ನಾವು ಜಮೀನಿನ ವಾಸ್ತವಿಕ ಚೆಕ್ಕುಬಂದಿಯನ್ನು ತೋರಿಸದೆ ನಮ್ಮ ಅನುಕೂಲಕ್ಕಾಗಿ ಬೇರೆಯವರ ಆಸ್ತಿಯ ಚೆಕ್ಕುಬಂದಿಯನ್ನು ತೋರಿಸಿ ಡಿಕ್ರಿಯನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 2 ರ ಪಾಲು ವಿಬಾಗ ಪತ್ರದಲ್ಲಿನ ಹಿಸ್ಸಾಗಳಂತೆ ಸಂಬಂದಪಟ್ಟ ಹಿಸ್ಸಾದಾರರು ಸ್ವಾದಿನಾನುಭವದಲ್ಲಿದ್ದರು ಸಹ ಅವರನ್ನು ಒಕ್ಕಲೆಬ್ಬಿಸುವ ದೃಷ್ಟಿಯಿಂದ ಸುಳ್ಳು ಡಿಕ್ರಿಯನ್ನು ಪಡೆದುಕೊಂಡು ಅದರ ಮೇಲೆ ಈ ಸುಳ್ಳು ದಾವೆಯನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದಲ್ಲಿ ತಹಶೀಲ್ದಾರವರನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. ದಾವೆಗೆ ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ವಿಬಾಗ ಪತ್ರದ ಹಿಸ್ಸೆಗಳಂತೆ ಹಿಸ್ಸಾದಾರರು ಸ್ವಾದೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಗಳು ನನ್ನ ತಂದೆ ಪಾಲಿನ ಆಸ್ತಿಯಲ್ಲಿ ಸ್ವಾದೀನದಲ್ಲಿದ್ದಾರೆ. ಅದರ ಸರ್ವೆ ಸಂ. 29/2 ಆಗಿದೆ. ಅದೇ ಆಸ್ತಿಗೆ ನಾವು ದಾವೆಯನ್ನು ಸಲ್ಲಿಸಿದ್ದೇವೆ.

<u>ಪಾಟೀಸವಾಲು **9** ಮತ್ತು **10** ನೇ ಪ್ರತಿವಾದಿಗಳ ಪರ ಮಾನ್ಯ ಸಹಾಯಕ ಸರ್ಕಾರಿ ವಕೀಲರಿಂದಃ</u>

ಖಾತೆ ಬದಲಾವಣೆಗಾಗಿ ಬಾದಿತ ವ್ಯಕ್ತಿಗಳಿಗೆ ನೋಟಿಸ್ ನ್ನು ಜಾರಿ ಮಾಡಲಾಗುತ್ತದೆ ಎಂದರೆ ಸರಿ. ದಾವಾ ಸ್ವತ್ತಿನ ಖಾತೆ ಬದಲಾವಣೆ ಕಾಲಕ್ಕೆ 10 ನೇ ಪ್ರತಿವಾದಿ ನಮಗೆ ನೋಟಿಸ್ ನ್ನು ಜಾರಿ ಮಾಡಿದ್ದರು ಎಂದರೆ ಸರಿಯಲ್ಲ. ನೋಟಿಸ್ ಜಾರಿಯಾದ ಮೇಲೆ ನಾವು ತಕರಾರನ್ನು ಸಲ್ಲಿಸಿದ್ದರು ಸಹ ನೋಟಿಸ್ ಜಾರಿಯಾಗಿಲ್ಲವೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಕರಾರಿಗೆ ಉತ್ತರವಾಗಿ 11 ಇ ನಕಾಶೆ ಹಾಗೂ ಚೆಕ್ಕುಬಂದಿಗೂ ತಾಳೆ ಇಲ್ಲ ಎಂದು ಹಿಂಬರಹ ನೀಡಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಗೆ ನೋಟಿಸ್ ಮತು ಹಿಂಬರಹ ಪ್ರತಿ ತೋರೀಸಿ ಕೇಳಲಾಗಿ ನಮಗೆ ಆ ಯಾವುದೇ ಪ್ರತಿಗಳು ಜಾರಿಯಾಗಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 9 ಮತ್ತು 10 ನೇದ್ದವರು ಸೂಕ್ತವಾದ ವಿಚಾರಣೆ ಮಾಡಿ ಹಿಂಬರಹ ನೀಡಿದ್ದರುೂ ಸಹ ಅನವಶ್ಯಕವಾಗಿ ಈ ದಾವೆಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ 8 ರಂತೆ ನಮಗೆ ಹಿಂಬರಹ ನೀಡಿಲಾಗಿದೆ ಎಂದರೆ ಸರಿ.

<u>ಮರು ವಿಚಾರಣೆಃ ಇಲ್ಲ.</u>

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು**)**

**ಓ.ಹೇ.ಕೇ.** ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.